**ಸಾಕ್ಷಿಗೆ ದಿನಾಂಕ 23.01.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀ S.K.S ವಕೀಲರಿಂದ**

ಮರಿಕಾಂತಮ್ಮರವರ ಪರಿಚಯ ಇದೆ. 2 ನೇ ವಾದಿ ಗೊತ್ತಿರುತ್ತಾರೆ. ಮೃತ ಕರಿನಾಯಕರವರು ನನಗೆ ಗೊತ್ತು. ಮೃತ ಕರಿನಾಯಕರವರು ದಾವಾ ಸ್ವತ್ತನ್ನು ಕ್ರಯಕ್ಕೆ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ದೊಡ್ಡತಮ್ಮನಾಯಕ ಬಿನ್ ಕಾಂತನಾಯಕ ಎಂದರೆ ಸರಿ. 2 ನೇ ಪ್ರತಿವಾದಿ ಕಾಂತನಾಯಕರವರ ಮಗ ಎಂದರೆ ಸರಿ. 3 ನೇ ಪ್ರತಿವಾದಿ ನನ್ನ ಚಿಕ್ಕಪ್ಪ ಎಂದರೆ ಸರಿಯಲ್ಲ ಸಾಕ್ಷಿ ನನ್ನ ದೊಡಪ್ಪ ಮಗ ಎಂದು ನುಡಿಯುತ್ತಾರೆ. ವಾದಿಯವರು ಹಾಜರುಪಡಿಸಿದ ದಾಖಲೆಗಳನ್ನು ನಾನು ನೋಡಿರುತ್ತೇನೆ. ಕಾಳವೀರನಾಯಕರವರ ಮಗ ಕರಿನಾಯಕ ಯಾರು ಎಂದು ನನಗೆ ಗೊತ್ತಿಲ್ಲ ಕರಿನಾಯಕ ಗೊತ್ತು. ಕಾಳವೀರನಾಯಕರವರ ಮಗ ಕರಿನಾಯಕ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ನಿಪಿ-1 ರಂತೆ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ 1972 ರಿಂದ 1989 ರವರೆಗೆ ಕರಿನಾಯಕರವರ ಹೆಸರಿಗೆ ಪಹಣಿ ಪತ್ರಿಕೆಯಲ್ಲಿ ಹೆಸರು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತು ಮೊದಲು ನಮ್ಮ ತಾತನ ಹೆಸರಿನಲ್ಲಿತ್ತು ನಂತರ ನನ್ನ ತಂದೆಯ ಹೆಸರಿಗೆ ಬಂದಿರುತ್ತದೆ ನನ್ನ ತಂದೆ ತೀರಿಕೊಂಡ ನಂತರ ಪೋತಿ ಆಧಾರದ ಮೇರೆಗೆ ನಮ್ಮ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದಾಗಿದೆ. ದಾಖಲೆಗಳನ್ನು ಸೃಷ್ಟಿಸಿ ಅಕ್ರಮವಾಗಿ ಪಹಣಿ ಪತ್ರಿಕೆಯಲ್ಲಿ ಹೆಸರು ನಮೂದು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಖಾತೆ ಬದಲಾವಣೆ ವಿಚಾರವಾಗಿ ಗ್ರಾಮದಲ್ಲಿ ಪಂಚಾಯಿತಿ ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿಯವರು ನಮ್ಮ ವಿರುದ್ಧ ಠಾಣೆಯಲ್ಲಿ ದೂರು ದಾಖಲು ಮಾಡಿರುತ್ತಾರೆ ಎಂದರೆ ಸರಿ ಸಾಕ್ಷಿ ಅಕ್ರಮವಾಗಿ ಸ್ವತ್ತನ್ನು ಬಿಟ್ಟುಕೊಡಿ ಎಂದು ದೂರು ದಾಖಲು ಮಾಡಿರುತ್ತಾರೆ. ದಾವಾ ಸ್ವತ್ತಿನ ಚೆಕ್ಕುಬಂದಿ ನನಗೆ ಸರಿಯಾಗಿ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ವಾದಿಯವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ ಸಾಕ್ಷಿ ನಾನು

ಸ್ವಾಧೀನದಲ್ಲಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿದೀಯಾ ಎಂದರೆ ಸಾಕ್ಷಿ ಎಲ್ಲವೂ ಗೊತ್ತಿಲ್ಲ ಸ್ವಲ್ಪ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತು ನಮಗೆ ಹೇಗೆ ಬಂದಿರುತ್ತದೆ ಎಂದು ಹೇಳಿ ಬರೆಸಿರುತ್ತೇನೆ. ದಾವಾ ಸ್ವತ್ತು ನಮಗೆ ಹೇಗೆ ಬಂದಿರುತ್ತದೆ ಎಂದು ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ರ ವಂಶವೃಕ್ಷವನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ವಂಶವೃಕ್ಷವನ್ನು ನಾನು ಹೇಳಿ ಬರೆಸಿ ಹಾಜರುಪಡಿಸಿರುತ್ತೇನೆ. 01 ಎಕರೆ 27 ಗುಂಟೆ ಜಮೀನು ಭಾಗವಾಗಿ ನನ್ನ ಹೆಸರಿಗೆ ಹಾಗೂ ಚಿಕ್ಕತಮ್ಮನಾಯಕ ಮತ್ತು 3 ನೇ ಪ್ರತಿವಾದಿಯ ಹೆಸರಿಗೆ ಪಹಣಿ ಪತ್ರಿಕೆ ಇರುತ್ತದೆ. ನಮ್ಮ ಹೆಸರಿಗೆ ಪಹಣಿ ಪತ್ರಿಕೆ ನಮೂದಾಗುವ ಪೂರ್ವದಲ್ಲಿ ದೊಡ್ಡತಮ್ಮನಾಯಕರವರ ಹೆಸರಿನಲ್ಲಿ ಪಹಣಿ ಪತ್ರಿಕೆ ಇತ್ತು.

1990 ರ ಸಾಲಿನಿಂದ ದೊಡ್ಡತಮ್ಮನಾಯಕರವರ ಹೆಸರಿಗೆ ಪಹಣಿ ಪತ್ರಿಕೆ ಬಂದಿರುತ್ತದೆ ಎಂದರೆ ಸರಿ. 1990 ರ ಪೂರ್ವದಲ್ಲಿ ದಾವಾ ಸ್ವತ್ತಿನ ಪಹಣಿ ಪತ್ರಿಕೆ ಕರಿನಾಯಕರವರ ಹೆಸರಿನಲ್ಲಿ ಪಹಣಿ ಪತ್ರಿಕೆ ಇರುತ್ತದೆ ಎಂದರೆ ಸರಿಯಲ್ಲ. ಕರಿನಾಯಕರವರು ನನ್ನ ತಂದೆ ಹಾಗೂ ಚಿಕ್ಕಪ್ಪರವರಿಂದ ದಾವಾ ಸ್ವತ್ತನ್ನು ಖರೀದಿಸಿರುವ ವಿಚಾರ ಗೊತ್ತಿದ್ದರು ಸಹ ಅಕ್ರಮವಾಗಿ ಖಾತೆ ಬದಲಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯವರು ದಾವಾ ಸ್ವತ್ತಿಗೆ ಮಾಲೀಕರು ಹಾಗೂ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**